KA14020017762024

**1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಶಿವಮೊಗ್ಗ**

**ಉಪಸ್ಥಿತರುಃ** ಶ್ರೀ ಪದ್ಮಾಕರ ವನಕುದ್ರೆ ಬಿ.ಎ., ಎಲ್.ಎಲ್.ಬಿ.,
1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಮು. ನ್ಯಾ ದಂ.ಗಳು, ಶಿವಮೊಗ್ಗ

**ದಿನಾಂಕ 29 ನೇ ಜುಲೈ ಮಾಹೆ 2026 ನೇ ಇಸವಿ**

**ಸಿ.ಸಿ.ಸಂಖ್ಯೆ 645/2024**

**ಪಿರ್ಯಾದುದಾರರುಃ** ತುಂಗಾನಗರ ಪೋಲೀಸ್ ಠಾಣೆ,
ಶಿವಮೊಗ್ಗ

**( ಪ್ರತಿನಿಧಿಸುವವರು ಸಹಾಯಕ ಸರ್ಕಾರಿ ಅಭಿಯೋಜಕರು, ಶಿವಮೊಗ್ಗ)**

ವಿರುದ್ಧ

**ಆರೋಪಿತರುಃ** 1. ಪರಮೇಶ್ ಬಿನ್ ಸಿದ್ದಗಂಗಯ್ಯ,
ವಯಸ್ಸುಃ 42 ವರ್ಷ, ಕೆಲಸಃ ಚಾಲಕ,
ವಾಸಃ ಕೊರಳಹಳ್ಳಿ ಗ್ರಾಮ,

ಸಿದ್ದೇಶ್ವರ ನಿಲಯ,  ಶಿವಮೊಗ್ಗ ತಾಲ್ಲೂಕು,
ಶಿವಮೊಗ್ಗ.

2. ರಾಜು ಬಿನ್ ನರಸಿಂಹಯ್ಯ,
ವಯಸ್ಸುಃ 45 ವರ್ಷ, ಕೆಲಸಃ ವ್ಯವಸಾಯ
ವಾಸಃ ಕೊರಳಹಳ್ಳಿ ಗ್ರಾಮ,
ಕಾಚಿನಕಟ್ಟೆ ಪೋಸ್ಟ್,  ಶಿವಮೊಗ್ಗ ತಾಲ್ಲೂಕು,
ಶಿವಮೊಗ್ಗ.

3. ನಾಗರಾಜ ಬಿನ್ ಚನ್ನಯ್ಯ,
ವಯಸ್ಸುಃ 37 ವರ್ಷ, ಕೆಲಸಃ ವ್ಯವಸಾಯ,
ವಾಸಃ ಕೊರಳಹಳ್ಳಿ ಗ್ರಾಮ,
ಕಾಚಿನಕಟ್ಟೆ ಪೋಸ್ಟ್,  ಶಿವಮೊಗ್ಗ ತಾಲ್ಲೂಕು,
ಶಿವಮೊಗ್ಗ.

4. ಕಿರಣ ಬಿನ್ ಜಯರಾಮ,
ವಯಸ್ಸುಃ 31 ವರ್ಷ, ಕೆಲಸಃ ವ್ಯವಸಾಯ,
ವಾಸಃ ಕೊರಳಹಳ್ಳಿ ಗ್ರಾಮ,
ಕಾಚಿನಕಟ್ಟೆ ಪೋಸ್ಟ್, ಶಿವಮೊಗ್ಗ ತಾಲ್ಲೂಕು,
ಶಿವಮೊಗ್ಗ.

5. ಕಿರಣ ಬಿನ್ ವೆಂಕಟೇಶ್,
ವಯಸ್ಸುಃ 28 ವರ್ಷ, ಕೆಲಸಃ ವ್ಯವಸಾಯ,
ವಾಸಃ ಕೊರಳಹಳ್ಳಿ ಗ್ರಾಮ,

ಕಾಚಿನಕಟ್ಟೆ ಪೋಸ್ಟ್, ಶಿವಮೊಗ್ಗ ತಾಲ್ಲೂಕು,
ಶಿವಮೊಗ್ಗ.

**(1 ರಿಂದ 5 ನೇ ಆರೋಪಿತರ ಪರ ಶ್ರೀ ಎಸ್. ಎಸ್. ಆರ್., ವಕೀಲರು)**

| | | |
|---|---|---|
| 1. ಅಪರಾಧ ನಡೆದ ದಿನಾಂಕ | : | 14.02.2023 |
| 2. ಪಿರ್ಯಾದು ನೀಡಿದ ದಿನಾಂಕ | : | 15.02.2023 |
| 3. ಪಿರ್ಯಾದುದಾರರ ಹೆಸರು | : | ಅರುಣ್ ಕುಮಾರ್ |
| 4. ಆಪಾದಿತರನ್ನು ಬಂಧಿಸಿದ ದಿನಾಂಕ | : | --- |
| 5. ಆರೋಪಿತರು ಬಿಡುಗಡೆಯಾದ ದಿನಾಂಕ | : | 17.02.2023 |
| 6. ಸಾಕ್ಷಿ ವಿಚಾರಣೆ ಆರಂಭಿಸಿದ ದಿನಾಂಕ | : | 13.07.2026 |
| 7. ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | : | 20.07.2026 |
| 8. ಆಪಾದಿತರ ವಿರುದ್ಧ ಇರುವ ಅಪರಾಧ | : | ಭಾ.ದಂ. ಸಂ.ಕಲಂ 143, 147, 148, 341, 323, 324, 504 ಮತ್ತು 506(2) ಸಹವಾಚಕ ಕಲಂ 149 |
| 9. ನ್ಯಾಯಾಲಯದ ತೀರ್ಪು | : | ಆರೋಪಿತರನ್ನು ಬಿಡುಗಡೆಗೊಳಿಸಲಾಗಿದೆ. |

**ತೀರ್ಪು**

ತುಂಗಾನಗರ ಪೋಲೀಸ್ ಠಾಣೆ ಉಪನಿರೀಕ್ಷಕರು, 1 ರಿಂದ 5 ನೇ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ.143, 147, 148, 341, 323, 324,

504 ಮತ್ತು 506(2) ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಗಳಿಗೆ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆ.**

ಪಿರ್ಯಾದುದಾರರು ಚಾಸಾ.3 ರವರ ತಾಯಿಯಾದ ಗೀತಾಮಣಿ ಅವರ ಹೆಸರನಲ್ಲಿದ್ದ ಕೊರಳಹಳ್ಳಿ ಗ್ರಾಮದ ಸರ್ವೆ ನಂ:96 (ಮೊದಲಿನ ಸರ್ವೆ ನಂ: 31 ) ರಲ್ಲಿನ 03 ಎಕರೆ ಜಮಿನನ್ನು ಖರೀದಿಸಿದ್ದು, ಸದರಿ ಜಮೀನು ಈಗ ಪಿರ್ಯಾದುದಾರರ ಹೆಸರಿನಲ್ಲಿ ಇರುತ್ತದೆ. ಸದರಿ ಜಮೀನಿನ ಹದ್ದು ಬಸ್ತುಗೆ ಸಂಬಂದಿಸಿದಂತೆ ಸರ್ವೆ ಇಲಾಖೆಗೆ ಅರ್ಜಿ ಹಾಕಿದ್ದು, ಈ ವಿಚಾರವಾಗಿ ಸರ್ವೆ ಇಲಾಖೆಯವರು ಅಕ್ಕ ಪಕ್ಕದ ಜಮೀನಿನವರಿಗೆ ನೋಟೀಸ್ ನೀಡಿ, ನಂತರ ದಿನಾಂಕ:14.02.2023 ರಂದು ಬೆಳಗ್ಗೆ ಪಿರ್ಯಾದುದಾರರಿಗೆ ಕರೆ ಮಾಡಿ ಸರ್ವೆಗೆ ಬರುವುದಾಗಿ ತಿಳಿಸಿದ್ದರು. ಆದ್ದರಿಂದ, ದಿನಾಂಕ 14.02.2022 ರಂದು ಪಿರ್ಯಾದುದಾರರು, ರಾಮ ಪ್ರಿಯಾ/ಚಾಸಾ-3, ಆತನ ಸ್ನೇಹಿತರಾದ ತಂಗವೇಲು/ಚಾಸಾ-2 ಹಾಗೂ ಮಾರುತಿ/ಚಾಸಾ-4 ರವರು ಜಮೀನಿನ ಹತ್ತಿರ ಬೆಳಿಗ್ಗೆ 11-00 ಗಂಟೆಗೆ ಹೋಗಿದ್ದರು. ಆ ವೇಳೆ ಅಲ್ಲಿಗೆ ಗುಂಪು ಕಟ್ಟಿಕೊಂಡು, ದೊಣ್ಣೆ ಮತ್ತು ಕುಡುಗೋಲು ಹಿಡಿದುಕೊಂಡು ಬಂದ 1 ರಿಂದ 5 ನೇ ಆರೋಪಿತರು

ಪಿರ್ಯಾದುದಾರರನ್ನು, ಆತನ ಕಡೆಯವರನ್ನು ಮತ್ತು ಸರ್ವೆ ರವರನ್ನು ತಡೆದು ನಿಲ್ಲಿಸಿ, ಸರ್ವೆ ಮಾಡದಂತೆ ಹೇಳಿದ್ದರಿಂದ ಸರ್ವೆಯವರು ಅಲ್ಲಿಂದ ಹೋಗಿರುತ್ತಾರೆ. ನಂತರ ಆರೋಪಿತರು ಪಿರ್ಯಾದುದಾರ, ಚಾಸಾ.2 ರಿಂದ 4 ರವರನ್ನು ತಡೆದು ನಿಲ್ಲಿಸಿ, ಅವಾಚ್ಯವಾಗಿ ಬೈದು, ಎಲ್ಲ ಆರೋಪಿತರು ಸೇರಿ ಚಾಸಾ-1 ರಿಂದ 4 ರವರಿಗೆ ಹೊಡೆದು, ಒದ್ದು, 1 ನೇ ಆರೋಪಿತನು ದೊಣ್ಣೆಯಿಂದ ಚಾಸಾ-2 ರವರ ಬೆನ್ನಿಗೆ ಮತ್ತು ತಲೆಗೆ ಹೊಡೆದಿದ್ದು, 3 ನೇ ಆರೋಪಿತನು ಕೈಯಲ್ಲಿದ್ದ ಕುಡುಗೋಲು ತೋರಿಸಿ, ಈ ಜಮೀನು ನಮ್ಮದು ಎಂದು, ಬಂದರೆ ಇದರಿಂದ ಹೊಡೆದು ನಿಮ್ಮನ್ನು ಸಾಯಿಸುತ್ತೇವೆ ಎಂದ ಜೀವ ಬೆದರಿಕೆ ಹಾಕಿರುತ್ತಾನೆ ಹಾಗೂ ಉಳಿದ ಇತರೆ ಆರೋಪಿತರು ಸಹ ಅದೇ ರೀತಿ ಬೆದರಿಕೆ ಹಾಕಿರುತ್ತಾರೆ. ಆ ಮೂಲಕ ಆರೋಪಿತರು ಭಾರತೀಯ ದಂಡ ಸಂಹಿತೆಯ ಕಲಂ 143, 147, 148, 341, 323, 324, 504 ಮತ್ತು 506(2) ಸಹವಾಚಕ ಕಲಂ 149 ರಡಿಯಲ್ಲಿ ಅಪರಾಧವನ್ನು ಎಸಗಿರುತ್ತಾರೆ ಎಂದು ಆರೋಪಿಸಿ ಚಾಸಾ-1 ರವರು ತುಂಗಾನಗರ ಪೊಲೀಸ್ ಠಾಣೆಯಲ್ಲಿ ಪ್ರಥಮ ವರ್ತಮಾನವನ್ನು ಸಲ್ಲಿಸಿರುತ್ತಾರೆ.

**3.** ಚಾಸಾ-1 ರವರು ಸಲ್ಲಿಸಿದ ದೂರಿನ ಮೇರೆಗೆ ತುಂಗಾನಗರ ಪೊಲೀಸರು 5 ಜನ ಆರೋಪಿತರ ವಿರುದ್ಧ ಕ್ರೈಂ ನಂ.60/2023 ರಲ್ಲಿ ಪ್ರಥಮ ವರ್ತಮಾನ ವರದಿ

ದಾಖಲಿಸಿರುತ್ತಾರೆ. ಚಾಸಾ–9/ತನಿಖಾಧಿಕಾರಿಗಳು, ತನಿಖೆಯನ್ನು ಪೂರ್ಣಗೊಳಿಸಿ 1 ರಿಂದ 5 ನೇ ಆರೋಪಿತರ ವಿರುದ್ಧ ಭಾ.ದಂ.ಸಂ. ಕಲಂ 143, 147, 148, 341, 323, 324, 504 ಮತ್ತು 506(2) ಸಹವಾಚಕ ಕಲಂ 149 ರಡಿಯಲ್ಲಿ ದಂಡನೀಯ ಅಪರಾಧಗಳಿಗೆ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

**4.** ನಂತರ 5 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ಶಿವಮೊಗ್ಗ ನ್ಯಾಯಾಲಯವು 1 ರಿಂದ 5 ಆರೋಪಿತರ ವಿರುದ್ಧ ಮೇಲ್ಕಂಡ ಅಪರಾಧಗಳಿಗೆ ಸಂಜ್ಞೆಯನ್ನು ತೆಗೆದುಕೊಂಡಿದೆ. 1 ರಿಂದ 5 ಆರೋಪಿತರು ತಮ್ಮ ವಕೀಲರ ಮೂಲಕ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ.

**5.** ನಂತರ ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಶಿವಮೊಗ್ಗ ರವರ ಆದೇಶ ಸಂಖ್ಯೆ ಎಡಿಎಂ.ಡಿಜೆಎಸ್ 13702–711/2024 ದಿ. 22.07.2024 ರ ಮೇರೆಗೆ ಪ್ರಕರಣವು ದಿನಾಂಕಃ 19.09.2024 ರಂದು ಈ ನ್ಯಾಯಾಲಯಕ್ಕೆ ವರ್ಗಾವಣೆ ಆಗಿರುತ್ತದೆ.

**6.** ಈ ನ್ಯಾಯಾಲಯವು ಭಾ.ದಂ.ಸಂ. ಕಲಂ 143, 147, 148, 341, 323, 324, 504 ಮತ್ತು 506(2) ಸಹವಾಚಕ ಕಲಂ 149 ರಡಿಯಲ್ಲಿ ದಂಡನೀಯ

ಅಪರಾಧಗಳಿಗೆ 1 ರಿಂದ 5 ನೇ ಆರೋಪಿತರ ವಿರುದ್ದ ದೋಷಾರೋಪಣೆ ಮಾಡಿ, ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಲಾಗಿ ಅವರು ತಾವು ತಪ್ಪು ಮಾಡಿಲ್ಲವೆಂದು ಹಾಗೂ ವಿಚಾರಣೆ ಮಾಡಬೇಕೆಂದು ಬಯಸಿರುತ್ತಾರೆ.

**7.** ತನ್ನ ನಿಲುವನ್ನು ಸಮರ್ಥಿಸಿಕೊಳ್ಳಲು ಅಭಿಯೋಜನೆಯು ಅಂತಿಮ ವರದಿಯಲ್ಲಿ ತೋರಿಸಿರುವ ಸಾಕ್ಷಿದಾರರ ಪೈಕಿ 4 ಜನ ಸಾಕ್ಷಿದಾರರನ್ನು ಪ್ರಾಸಾ–1 ರಿಂದ ಪ್ರಾಸಾ–4 ಎಂದು ವಿಚಾರಣೆ ಮಾಡಿ, 8 ದಾಖಲೆಗಳನ್ನು ನಿಶಾನೆಗೊಳಿಸಿ ಗುರುತಿಸಿಕೊಂಡಿದ್ದಾರೆ. ಪ್ರಕರಣದ ಪಿರ್ಯಾದಿ ಹಾಗೂ ಗಾಯಾಳು ಚಾಸಾ–1 ರವರು ಪ್ರಾಸಾ–1 ಎಂದು, ಇನ್ನುಳಿದ ಗಾಯಾಳು ಹಾಗೂ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ–2 ರಿಂದ 4 ರವರು ಪ್ರಾಸಾ–2 ರಿಂದ ಪ್ರಾಸಾ–4 ಎಂದು ಸಾಕ್ಷ್ಯ ನುಡಿದಿರುತ್ತಾರೆ.

**8.** ಅಭಿಯೋಜನೆಯ ಪರವಾಗಿ ನ್ಯಾಯಾಲಯದ ಮುಂದೆ ವಿಚಾರಣೆ ಮಾಡಲಾದ ಪ್ರಕರಣದ ಪ್ರಮುಖ ಸಾಕ್ಷಿಗಳಾದ ಪ್ರಾಸಾ–1 ರಿಂದ 4 ರವರು ಅಭಿಯೋಜನೆಯ ಪ್ರಕರಣದ ವಿರುದ್ಧ ಸಾಕ್ಷಿ ನುಡಿದಿದ್ದಾರೆ. ಪ್ರಕರಣದ ಪ್ರಮುಖ ಸಾಕ್ಷಿದಾರರಾದ ಪ್ರಾಸಾ–1 ರಿಂದ 4 ರವರು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿದಾರರಾಗಿದ್ದರಿಂದ ಉಳಿದ ಸಾಕ್ಷಿದಾರರ ಸಾಕ್ಷ್ಯವು ಅನವಶ್ಯಕ ಎಂದು ಈ ನ್ಯಾಯಾಲಯ

ಅಭಿಪ್ರಾಯ ಪಡುತ್ತಾ ಉಳಿದ ಸಾಕ್ಷಿದಾರರನ್ನು ಸಾಕ್ಷ್ಯ ವಿಚಾರಣೆಯಿಂದ ಕೈ ಬಿಡಲಾಗಿದೆ. ಅದರಂತೆ ಪ್ರಾಸಾ-1 ರಿಂದ 4 ರವರು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿದಾರರಾಗಿ ಮತ್ತು ಆಪಾದಿತರ ವಿರುದ್ದ ಸಾಕ್ಷ್ಯವನ್ನು ನುಡಿಯದೇ ಇದ್ದುದರಿಂದ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ರ ಅಡಿಯಲ್ಲಿ ಆಪಾದಿತರ ಹೇಳಿಕೆಗಳನ್ನು ದಾಖಲಿಸಿಕೊಳ್ಳಲು ವಿನಾಯಿತಿಗೊಳಿಸಲಾಗಿದೆ.

**9.** ಉಭಯ ಪಕ್ಷದವರ ಪರ ವಕೀಲರ ವಾದವನ್ನು ಆಲಿಸಲಾಯಿತು.

**10.** ಅಭಿಯೋಜನಾ ಪಕ್ಷದವರು ಆರೋಪಿತರ ವಿರುದ್ಧ ಮಾಡಿರುವ ಆರೋಪಗಳ ರೀತ್ಯಾ ನನ್ನ ತೀರ್ಮಾನಕ್ಕೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.

1. ದಿನಾಂಕ 14.02.2023 ರಂದು ಬೆಳಗ್ಗೆ 11.00 ಗಂಟೆ ಸಮಯದಲ್ಲಿ ಕೊರಳಹಳ್ಳಿ ಗ್ರಾಮದ ನರಸಿಂಹಯ್ಯ ರವರಿಗೆ ಸೇರಿದ ಅಡಿಕೆ ತೋಟದ ಎದುರು ಇರುವ ರಸ್ತೆಯಲ್ಲಿ ಹೋಗುತ್ತಿರುವಾಗ, 1 ರಿಂದ 5 ನೇ ಆರೋಪಿತರು ಅಪರಾಧ ಕೃತ್ಯವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಕೂಟ ರಚಿಸಿ, ಅಕ್ರಮ ಕೂಟದ ಸದಸ್ಯರಾಗಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 143 ಸಹವಾಚಕ ಕಲಂ 149 ರನ್ವಯ ಅಪರಾಧವೆಸಗಿದ್ದಾರೆಂದು ರುಜುವಾತುಪಡಿಸುವರೇ?

2. ದಿನಾಂಕ 14.02.2023 ರಂದು ಬೆಳಗ್ಗೆ 11.00 ಗಂಟೆ ಸಮಯದಲ್ಲಿ ಕೊರಳಹಳ್ಳಿ ಗ್ರಾಮದ ನರಸಿಂಹಯ್ಯ ರವರಿಗೆ ಸೇರಿದ ಅಡಿಕೆ ತೋಟದ ಎದುರು ಇರುವ ರಸ್ತೆಯಲ್ಲಿ ಹೋಗುತ್ತಿರುವಾಗ, 1 ರಿಂದ 5 ನೇ

ಆರೋಪಿತರು ಅಪರಾಧ ಕೃತ್ಯವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಕೂಟ ರಚಿಸಿ, ಚಾಸಾ.1 ರಿಂದ ಚಾಸಾ.4 ರವರ ಜೊತೆ ಗಲಭೆ ಮಾಡಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 147 ಸಹವಾಚಕ ಕಲಂ 149 ರನ್ವಯ ಅಪರಾಧವೆಸಗಿದ್ದಾರೆಂದು ರುಜುವಾತುಪಡಿಸುವರೇ?

3. ದಿನಾಂಕ 14.02.2023 ರಂದು ಬೆಳಗ್ಗೆ 11.00 ಗಂಟೆ ಸಮಯದಲ್ಲಿ ಕೊರಳಹಳ್ಳಿ ಗ್ರಾಮದ ನರಸಿಂಹಯ್ಯ ರವರಿಗೆ ಸೇರಿದ ಅಡಿಕೆ ತೋಟದ ಎದುರು ಇರುವ ರಸ್ತೆಯಲ್ಲಿ ಹೋಗುತ್ತಿರುವಾಗ, 1 ರಿಂದ 5 ನೇ ಆರೋಪಿತರು ಅಪರಾಧ ಕೃತ್ಯವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಕೂಟ ರಚಿಸಿ, ಮಾರಣಾಂತಿಕ ಆಯುಧಗಳಾದ ಕಬ್ಬಿಣದ ಕುಡುಗೋಲು ಹಾಗೂ ದೊಣ್ಣೆ ಗಳನ್ನು ಹಿಡಿದು ಗಲಭೆ ಮಾಡಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 148 ಸಹವಾಚಕ ಕಲಂ 149 ರನ್ವಯ ಅಪರಾಧವೆಸಗಿದ್ದಾರೆಂದು ರುಜುವಾತುಪಡಿಸುವರೇ?

4. ದಿನಾಂಕ 14.02.2023 ರಂದು ಬೆಳಗ್ಗೆ 11.00 ಗಂಟೆ ಸಮಯದಲ್ಲಿ ಕೊರಳಹಳ್ಳಿ ಗ್ರಾಮದ ನರಸಿಂಹಯ್ಯ ರವರಿಗೆ ಸೇರಿದ ಅಡಿಕೆ ತೋಟದ ಎದುರು ಇರುವ ರಸ್ತೆಯಲ್ಲಿ ಹೋಗುತ್ತಿರುವಾಗ, 1 ರಿಂದ 5 ನೇ ಆರೋಪಿತರು ಅಪರಾಧ ಕೃತ್ಯವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಕೂಟ ರಚಿಸಿ, ಚಾಸಾ-1 ರಿಂದ ಚಾಸಾ-4 ರವರಿಗೆ ಅಡ್ಡಗಟ್ಟಿ ತಡೆದು ನಿಲ್ಲಿಸಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 341 ಸಹವಾಚಕ ಕಲಂ 149 ರನ್ವಯ ಅಪರಾಧವೆಸಗಿದ್ದಾರೆಂದು ರುಜುವಾತುಪಡಿಸುವರೇ?

5. ದಿನಾಂಕ 14.02.2023 ರಂದು ಬೆಳಗ್ಗೆ 11.00 ಗಂಟೆ ಸಮಯದಲ್ಲಿ ಕೊರಳಹಳ್ಳಿ ಗ್ರಾಮದ ನರಸಿಂಹಯ್ಯ ರವರಿಗೆ ಸೇರಿದ ಅಡಿಕೆ ತೋಟದ ಎದುರು ಇರುವ ರಸ್ತೆಯಲ್ಲಿ ಹೋಗುತ್ತಿರುವಾಗ, 1 ರಿಂದ 5 ನೇ ಆರೋಪಿತರು ಅಪರಾಧ ಕೃತ್ಯವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಕೂಟ ರಚಿಸಿ, ಚಾಸಾ-1 ರವರಿಗೆ ಅವಾಚ್ಯ ಶಬ್ಧಗಳಿಂದ ಬೈದು ಅವಮಾನ

ಮಾಡಿ, ಸಾರ್ವಜನಿಕರ ಶಾಂತಿಗೆ ಕುಂದು ಉಂಟಾಗುವ ರೀತಿಯಾಗಿ ನಡೆದುಕೊಂಡು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 149 ರನ್ವಯ ಅಪರಾಧವೆಸಗಿದ್ದಾರೆಂದು ರುಜುವಾತುಪಡಿಸುವರೇ?

6. ದಿನಾಂಕ 14.02.2023 ರಂದು ಬೆಳಗ್ಗೆ 11.00 ಗಂಟೆ ಸಮಯದಲ್ಲಿ ಕೊರಳಹಳ್ಳಿ ಗ್ರಾಮದ ನರಸಿಂಹಯ್ಯ ರವರಿಗೆ ಸೇರಿದ ಅಡಿಕೆ ತೋಟದ ಎದುರು ಇರುವ ರಸ್ತೆಯಲ್ಲಿ ಹೋಗುತ್ತಿರುವಾಗ, 1 ರಿಂದ 5 ನೇ ಆರೋಪಿತರು ಅಪರಾಧ ಕೃತ್ಯವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಕೂಟ ರಚಿಸಿ, ಆರೋಪಿತರು ಚಾಸಾ-1 ರಿಂದ ಚಾಸಾ-4 ರವರಿಗೆ ಕೈಗಳಿಂದ ಹೊಡೆದು, ಸಾಮಾನ್ಯ ಸ್ವರೂಪದ ನೋವುಂಟು ಮಾಡಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 149 ರನ್ವಯ ಅಪರಾಧವೆಸಗಿದ್ದಾರೆಂದು ರುಜುವಾತುಪಡಿಸುವರೇ?

7. ದಿನಾಂಕ 14.02.2023 ರಂದು ಬೆಳಗ್ಗೆ 11.00 ಗಂಟೆ ಸಮಯದಲ್ಲಿ ಕೊರಳಹಳ್ಳಿ ಗ್ರಾಮದ ನರಸಿಂಹಯ್ಯ ರವರಿಗೆ ಸೇರಿದ ಅಡಿಕೆ ತೋಟದ ಎದುರು ಇರುವ ರಸ್ತೆಯಲ್ಲಿ ಹೋಗುತ್ತಿರುವಾಗ, 1 ರಿಂದ 5 ನೇ ಆರೋಪಿತರು ಅಪರಾಧ ಕೃತ್ಯವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಕೂಟ ರಚಿಸಿ, 1 ನೇ ಆರೋಪಿತನು ದೊಣ್ಣೆಯಿಂದ ಚಾಸಾ-2 ರವರ ತಲೆಗೆ ಹಾಗೂ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯಪಡಿಸಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 149 ರನ್ವಯ ಅಪರಾಧವೆಸಗಿದ್ದಾರೆಂದು ರುಜುವಾತುಪಡಿಸುವರೇ?

8. ದಿನಾಂಕ 14.02.2023 ರಂದು ಬೆಳಗ್ಗೆ 11.00 ಗಂಟೆ ಸಮಯದಲ್ಲಿ ಕೊರಳಹಳ್ಳಿ ಗ್ರಾಮದ ನರಸಿಂಹಯ್ಯ ರವರಿಗೆ ಸೇರಿದ ಅಡಿಕೆ ತೋಟದ ಎದುರು ಇರುವ ರಸ್ತೆಯಲ್ಲಿ ಹೋಗುತ್ತಿರುವಾಗ, 1 ರಿಂದ 5 ನೇ ಆರೋಪಿತರು ಅಪರಾಧ ಕೃತ್ಯವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ

ಕೂಟ ರಚಿಸಿ, 3 ನೇ ಆರೋಪಿತನು ಕೈಯಲ್ಲಿದ್ದ ಕುಡುಗೋಲನ್ನು ಚಾಸಾ.1 ರಿಂದ ಚಾಸಾ.4 ರವರಿಗೆ ತೋರಿಸಿ, ಜಮೀನು ನಮ್ಮದು ಎಂದು ಬಂದರೆ ಹೊಡೆದು ನಿಮ್ಮನ್ನು ಸಾಯಿಸುತ್ತೇವೆ ಎಂದು ಜೀವ ಬೆದರಿಕೆ ಹಾಕಿ, ಇತರೆ ಆರೋಪಿತರು ಜಮೀನಿನ ಅಳತೆ ವಿಚಾರಕ್ಕೆ ಬಂದರೆ ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲವೆಂದು ಜೀವ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆಯನ್ನು ಉಂಟು ಮಾಡಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506(2) ಸಹವಾಚಕ ಕಲಂ 149 ರನ್ವಯ ಅಪರಾಧವೆಸಗಿದ್ದಾರೆಂದು ರುಜುವಾತುಪಡಿಸುವರೇ?

9. ಏನು ಆದೇಶ?

**11.** ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತೇನೆ.

| | | |
|---|---|---|
| ಅಂಶ 1 ರಿಂದ 8 | : | ನಕಾರಾತ್ಮಕವಾಗಿ |
| ಅಂಶ 9 | : | ಅಂತಿಮ ಆದೇಶದಂತೆ |

## ಕಾರಣಗಳು

**12.** **ಅಂಶ 1 ರಿಂದ 8** :- ಈ ಎಲ್ಲಾ ಅಂಶಗಳು ಒಂದೇ ಘಟನೆಯಿಂದ ಉದ್ಭವಿಸಿರುವುದರಿಂದ, ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಎಲ್ಲಾ ಅಂಶಗಳನ್ನು ಒಟ್ಟಿಗೆ ಚರ್ಚಿಸಲಾಗಿರುತ್ತದೆ. ಆರೋಪಿತರು ಫಿರ್ಯಾದಿ ಪ್ರಾಸಾ-1 ರಿಂದ 4 ರವರ ವಿರುದ್ಧ ದಿನಾಂಕಃ 14.02.2023 ರಂದು ಭಾರತೀಯ ದಂಡ ಸಂಹಿತೆ ಕಲಂ 143, 147, 148, 341, 323, 324, 504 ಮತ್ತು 506(2) ಸಹವಾಚಕ ಕಲಂ 149 ರಡಿಯಲ್ಲಿ ದಂಡನೀಯ

ಅಪರಾಧಗಳನ್ನು ಮಾಡಿದ್ದಾರೆಂದು ಅಭಿಯೋಜನೆಯ ಆರೋಪವಾಗಿದ್ದು, ಸದರಿ ಆರೋಪಗಳನ್ನು ಸಾಬೀತುಪಡಿಸುವ ಜವಾಬ್ದಾರಿ ಅಭಿಯೋಜನೆಯ ಮೇಲಿದೆ. ಸದರಿ ಜವಾಬ್ದಾರಿಯನ್ನು ಸಾಬೀತುಪಡಿಸಲು ಅಭಿಯೋಜನಾ ಪಕ್ಷದವರು ಈ ಪ್ರಕರಣದಲ್ಲಿ ಫಿರ್ಯಾ ಸಾ–1 ರಿಂದ 4 ರವರನ್ನು ವಿಚಾರಣೆಗೊಳಪಡಿಸಿ ನಿಪಿ–1 ರಿಂದ 8 ದಾಖಲೆಗಳನ್ನು ಗುರುತಿಸಿಕೊಂಡಿದ್ದಾರೆ.

**13.** ಫ್ರಾಸಾ–1 ಅರುಣ್ ಕುಮಾರ್ ಎಸ್ ಅವರು ಸಾಕ್ಷ್ಯ ನುಡಿದು, ಈ ಪ್ರಕರಣದ ಕುರಿತು ತನಗೆ ಮಾಹಿತಿ ಇಲ್ಲ. ಆರೋಪಿತರು ತನಗೆ, ಚಾಸಾ–2 ರಿಂದ 4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಹೊಡೆದಿಲ್ಲ ಮತ್ತು ಜೀವ ಬೆದರಿಕೆ ಹಾಕಿಲ್ಲ, ಆರೋಪಿತರು ತಮ್ಮನ್ನು ಅಡ್ಡಗಟ್ಟಿಲ್ಲ. ತಾನು ಆರೋಪಿತರ ವಿರುದ್ಧ ಯಾವುದೇ ದೂರು ನೀಡಿಲ್ಲ. ನಿಪಿ–1 ದೂರಿನಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ, ತನ್ನ ಹಾಗೂ ಆರೋಪಿತರ ಮಧ್ಯೆ ಜಮೀನಿನ ವಿಷಯವಾಗಿ ಆಗಿದ್ದ ಬಾಯಿ ಮಾತಿನ ತಕರಾರಿನ ಕುರಿತು ಮಾಹಿತಿ ನೀಡಲು ಠಾಣೆಗೆ ಹೋಗಿದ್ದಾಗ ನಿಪಿ–1 ದಾಖಲೆಗೆ ಸಹಿ ಮಾಡಿರಬಹುದು. ನಿಪಿ–2 ಮಹಜರಿನಲ್ಲಿ ಏನು ಬರೆದಿದೆ ಎಂದು ತನಗೆ ಗೊತ್ತಿಲ್ಲ, ಫೋಟೋಗಳನ್ನು ಏಕೆ ತೆಗೆದಿದ್ದಾರೆ ಎಂದು ತನಗೆ ಗೊತ್ತಿಲ್ಲ, ಪೋಲೀಸರಿಗೆ ತಾನು

ಯಾವುದೇ ಮರು ಹೇಳಿಕೆ ನೀಡಿರುವುದಿಲ್ಲ. ಪೊಲೀಸರು ತನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದು ಸಾಕ್ಷ್ಯನುಡಿದಿರುತ್ತಾರೆ.

**14.** ಪ್ರತ್ಯಕ್ಷ ಸಾಕ್ಷಿದಾರರುಗಳಾದ ಫ್ರಾಸಾ-2 ರಿಂದ ಫ್ರಾಸಾ-4 ರವರು ಸಾಕ್ಷ್ಯ ನುಡಿದು ಆರೋಪಿತರು ತಮ್ಮ ವಿರುದ್ಧ ಯಾವುದೇ ಅಪರಾಧ ಮಾಡಿಲ್ಲ, ಈ ಪ್ರಕರಣದ ಕುರಿತು ತಮಗೆ ಮಾಹಿತಿ ಇಲ್ಲ ಹಾಗೂ ತಾವು ಪೋಲೀಸರ ಮುಂದೆ ಯಾವುದೇ ಹೇಳಿಕೆಗಳನ್ನು ನೀಡಿಲ್ಲ  ಎಂದು ಸಾಕ್ಷ್ಯನುಡಿದಿರುತ್ತಾರೆ.

**15.** ಮಾನ್ಯ ಸರ್ಕಾರಿ ಅಭಿಯೋಜಕರು ಫ್ರಾಸಾ-1 ರಿಂದ 4 ರವರನ್ನು ಪ್ರತಿಕೂಲ ಸಾಕ್ಷಿಗಳೆಂದು ಪರಿಗಣಿಸಿ ಪಾಟೀ ಸವಾಲು ಮಾಡಿದರೂ ಸಹ ಪಾಟೀ ಸವಾಲಿನಲ್ಲಿ ಯಾವುದೇ ಒಪ್ಪಿಗೆಯನ್ನು ಪಡೆದುಕೊಳ್ಳಲು ವಿಫಲರಾಗಿರುತ್ತಾರೆ. ಫ್ರಾಸಾ-1 ರವರು ನಿಪಿ-1 ರಂತೆ ನೀಡಿರುವ ದೂರು, ನಿಪಿ-2 ರಂತೆ ಗುರುತಿಸಲಾಗಿರುವ ಪಂಚನಾಮೆ , ನಿಪಿ-3 ಮತ್ತು 4 ರಂತೆ ತೆಗೆದಿರುವ ಫೋಟೋಗಳು ಹಾಗೂ ನಿಪಿ-5 ರಂತೆ ನೀಡಿರುವ ತಮ್ಮ ಮರು ಹೇಳಿಕೆಯನ್ನು ಅಲ್ಲಗಳೆದಿರುತ್ತಾರೆ. ಅಲ್ಲದೇ, ಫ್ರಾಸಾ-2 ರಿಂದ ಫ್ರಾಸಾ-4 ರವರು ನಿಪಿ-6 ರಿಂದ 8 ರಂತೆ ನೀಡಿರುವ ಹೇಳಿಕೆಗಳನ್ನು ಅಲ್ಲಗಳೆದಿರುತ್ತಾರೆ.

**16.** ಪ್ರಕರಣದ ಮುಖ್ಯ ಸಾಕ್ಷಿ ಹಾಗೂ ದೂರುದಾರರಾದ ಪ್ರಾಸಾ–1 ರವರು ಮತ್ತು ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾಸಾ–2 ರಿಂದ 4 ರವರು ಅಭಿಯೋಜನೆಯ ಪರ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಹಾಗಾಗಿ ಪ್ರಾಸಾ–1 ರಿಂದ 4 ರವರ ಮೌಖಿಕ ಸಾಕ್ಷವು 1 ರಿಂದ 5 ನೇ ಆರೋಪಿತರ ವಿರುದ್ದ ಮಾಡಲಾಗಿರುವ ಆರೋಪಗಳನ್ನು ಸಾಬೀತು ಪಡಿಸಲು ಸಾಕಾಗುವುದಿಲ್ಲ. ಮುಖ್ಯ ಸಾಕ್ಷಿಗಳಾದ ಪ್ರಾಸಾ–1 ರಿಂದ 4 ರವರು ಪ್ರಕರಣದ ವಿರುದ್ಧ ಸಾಕ್ಷಿ ನುಡಿದಿದ್ದರಿಂದ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡಿದರೂ ಯಾವುದೇ ಪ್ರಯೋಜನವಾಗುವುದಿಲ್ಲ ಎಂದು ತಿಳಿದು ಉಳಿದ ಸಾಕ್ಷಿದಾರರ ವಿಚಾರಣೆಯನ್ನು ಕೈಬಿಡಲಾಗಿರುತ್ತದೆ. ಪ್ರಾಸಾ–1 ರಿಂದ 4 ರವರ ಸಾಕ್ಷ್ಯದಲ್ಲಿ ಆರೋಪಿತರನ್ನು ಆಪಾದನೆಗೆ ಒಳಪಡಿಸುವ ಯಾವುದೇ ಒಂದು ಚಿಕ್ಕ ಆಪಾದನೆಯೂ ಕೂಡಾ ಕಂಡುಬರುವುದಿಲ್ಲ. ಆದ್ದರಿಂದ ಅಭಿಯೋಜನೆಯು ಆರೋಪಿತರ ಮೇಲೆ ಹೊರಿಸಲಾದ ಆಪಾದನೆಯನ್ನು ಯುಕ್ತ ಸಂಶಯದಿಂದಾಚೆ ಸಾಬೀತು ಪಡಿಸಲು ವಿಫಲವಾಗಿದೆ ಎಂದು ಅಭಿಪ್ರಾಯಪಡುತ್ತೇನೆ. ಆದ್ದರಿಂದ ಈ ಮೇಲಿನ 1 ರಿಂದ 8 ನೇ ಅಂಶಗಳನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

17. **<u>ಅಂಶ 9</u>**:- ಈ ಮೇಲ್ಕಂಡಂತೆ ಚರ್ಚಿಸಿ ಬಂದ ನಿರ್ಣಯದಂತೆ ಈ ಕೆಳಕಂಡಂತೆ ಆದೇಶಿಸುತ್ತೇನೆ.

**<u>ಆದೇಶ</u>**

ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1) ರ ರೀತ್ಯಾ 1 ರಿಂದ 5 ನೇ ಆರೋಪಿತರ ವಿರುದ್ಧ ಮಾಡಿರುವ ಭಾರತೀಯ ದಂಡ ಸಂಹಿತೆ ಕಲಂ 143, 147, 148, 341, 323, 324, 504 ಮತ್ತು 506(2) ಸಹವಾಚಕ ಕಲಂ 149 ರಡಿಯಲ್ಲಿನ ಆರೋಪಣೆಗಳಿಗಾಗಿ ಆರೋಪಿತರನ್ನು ದೋಷಮುಕ್ತರೆಂದು ಖುಲಾಸೆ ಮಾಡಲಾಗಿದೆ.

ಈ ಪ್ರಕರಣದಲ್ಲಿ ಮಾಲುಪಟ್ಟಿ ಸಂಖ್ಯೆ: 62/2023 ರಂತೆ ಜಪ್ತುಪಡಿಸಿದ ದೊಣ್ಣೆ ಬೆಲೆಯುಳ್ಳ ವಸ್ತು ಆಗಿರದೇ ಇರುವುದರಿಂದ ಅದನ್ನು ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸುವಂತೆ ಆದೇಶಿಸಿದೆ.

ಈ ಪ್ರಕರಣದಲ್ಲಿ ಮಾಲುಪಟ್ಟಿ ಸಂಖ್ಯೆ: 62/2023 ರಂತೆ ಜಪ್ತುಪಡಿಸಿದ ಕಬ್ಬಿಣದ ಕುಡುಗೋಲು ಬೆಲೆಯುಳ್ಳ ವಸ್ತು ಆಗಿರುವುದರಿಂದ

ಅದನ್ನು ಮೇಲ್ಮನವಿ ಅವಧಿ ಮುಗಿದ ನಂತರ ಸರ್ಕಾರಕ್ಕೆ ಮುಟ್ಟುಗೋಲು ಮಾಡಲು ಆದೇಶಿಸಿದೆ.

1 ರಿಂದ 5 ನೇ ಆರೋಪಿತರ ಮತ್ತು ಜಾಮೀನುದಾರನ ಜಾಮೀನು ಮುಚ್ಚಳಿಕೆಗಳನ್ನು ರದ್ದುಗೊಳಿಸಿದೆ.

(ಮೇಲಿನ ತೀರ್ಪನ್ನು ಶೀಘ್ರಲಿಪಿಗಾರರಿಂದ ನೇರವಾಗಿ ಕಂಪ್ಯೂಟರ್ ಮೂಲಕ ಬೆರಳಚ್ಚು ಮಾಡಿಸಿ ನನ್ನಿಂದ ಸೂಕ್ತವಾಗಿ ತಿದ್ದುಪಡಿ ಮಾಡಿ ನಂತರ ಮುಕ್ತ ನ್ಯಾಯಾಲಯದಲ್ಲಿ ತೀರ್ಪನ್ನು **ದಿನಾಂಕಃ 29 ನೇ ಜುಲೈ 2026** ರಂದು ಘೋಷಿಸಲಾಯಿತು)

**(ಪದ್ಮಾಕರ ವನಕುದ್ರೆ)**
**1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು**
**ಮತ್ತು ಮು. ನ್ಯಾ ದಂ.ಗಳು, ಶಿವಮೊಗ್ಗ.**

## ಅನುಬಂಧ

**ಅಭಿಯೋಜನೆಯ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳುಃ**

| | | |
|---|---|---|
| ಫ್ರಾಸಾ 1 | : | ಅರುಣ್ ಕುಮಾರ್ ಎಸ್ ತಂದೆ ಸೆಲ್ವರಾಜು |
| ಫ್ರಾಸಾ 2 | : | ತಂಗವೇಲು ತಂದೆ ಪೆರಿಸ್ವಾಮಿ |
| ಫ್ರಾಸಾ 3 | : | ರಾಮಪ್ರಿಯ ತಂದೆ ಅಳಸಿಂಗಚಾರ್ |
| ಫ್ರಾಸಾ 4 | : | ಮಾರುತಿ ತಂದೆ ಹನಮಂತ |

**ಆರೋಪಿತರ ಪರ ವಿಚಾರಣೆಗೆ ಒಳಪಟ್ಟ ಸಾಕ್ಷಿದಾರರುಃ**

– ಇಲ್ಲ –

**ಅಭಿಯೋಜನೆಯ ಪರ ಹಾಜರುಪಡಿಸಿ  ಗುರುತು ಹಾಕಲ್ಪಟ್ಟ ದಾಖಲೆಗಳು:**

| | | |
|---|---|---|
| ನಿ ಪಿ 1 | : | ಪ್ರಥಮ ಮಾಹಿತಿ |
| ನಿ ಪಿ 1(ಎ) | : | ಫ್ರಾಸಾ–1  ರವರ ಸಹಿ |
| ನಿ ಪಿ 2 | : | ಸ್ಥಳ ಮತ್ತು ಅಮಾನತ್ತು ಪಂಚನಾಮೆ |
| ನಿ ಪಿ 2(ಎ) | : | ಫ್ರಾಸಾ–1  ರವರ ಸಹಿ |
| ನಿ ಪಿ 3, 4 | : | ಫೋಟೋಗಳು |
| ನಿ ಪಿ 5 | : | ಫ್ರಾಸಾ–1 ರವರ ಮರು ಹೇಳಿಕೆ |
| ನಿ ಪಿ 6 | : | ಫ್ರಾಸಾ–2 ರವರ ಹೇಳಿಕೆ |
| ನಿ ಪಿ 7 | : | ಫ್ರಾಸಾ–3 ರವರ ಹೇಳಿಕೆ |
| ನಿ ಪಿ 8 | : | ಫ್ರಾಸಾ–4 ರವರ ಹೇಳಿಕೆ |

**ಆರೋಪಿತರ  ಪರ ಗುರುತು ಮಾಡಲ್ಪಟ್ಟ ದಾಖಲಾತಿಗಳು:**

– ಇಲ್ಲ –

**ಅಭಿಯೋಜನೆಯ ಪರ ಹಾಜರುಪಡಿಸಿ ಗುರುತು ಹಾಕಲ್ಪಟ್ಟ ಮುದ್ದೆಮಾಲುಗಳು:**

– ಇಲ್ಲ –

PADMAKAR JAMBU VANAKUDRE

Digitally signed by PADMAKAR JAMBU VANAKUDRE
Date: 2026.07.29 17:18:21 +0530

**(ಪದ್ಮಾಕರ ವನಕುದ್ರೆ)**

**1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು**

**ಮತ್ತು ಮು. ನ್ಯಾ ದಂ.ಗಳು, ಶಿವಮೊಗ್ಗ**